ಶ್ರೀ ವೀರಕುಮಾರ್ ಪಾಟೀಲ್ (ಇಂದನ ರಾಜ್ಯ ಸಚಿವರು) :—

ಅ ಮತ್ತು ಆ) ರಾಜ್ಯದಲ್ಲಿ ಈ ವರ್ಷದಲ್ಲಿ (2001-02), ಫೆಬ್ರುವರಿ ಅಂತ್ಯಕ್ಕೆ ಉಂಟಾಗಿರುವ ವಿದ್ಯುಚ್ಛಕ್ತಿಯ ಅಂದಾಜು ಕೊರತೆ, ಅನಿರ್ದಿಷ್ಟ ಬೇಡಿಕೆ ಹಾಗೂ ನಿರೀಕ್ಷಿತ ಲಭ್ಯತೆ ಈ ಕೆಳಕಂಡಂತಿದೆ

ಅನಿರ್ಧಿಷ್ಟ ಲಭ್ಯತೆ 31500 ಮಿ.ಯೂ.
ನಿರೀಕ್ಷಿತ ಲಭ್ಯತೆ 29100 ಮಿ.ಯೂ.
ಅಂದಾಜು ಕೊರತೆ 2400 ಮಿ.ಯೂ.

ಇ ಮತ್ತು ಈ) ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಕೇಂದ್ರ ಉತ್ಪಾದನ ಘಟಕಗಳಿಂದ ವಿದ್ಯುತ್ ಪಡೆಯುವುದರ ಜೊತೆಗೆ ಪವರ್ ಟ್ರೇಡಿಂಗ್ ಕಾರ್ಪೋರೇಷನ್ ಲಿಮಿಟೆಡ್ ಇಂಡಿಯಾ (ಪಿಟಿಸಿಎಲ್)ರಿಂದ 150 ಮೆಗಾ ವ್ಯಾಟ್ ಅಧಿಕ ವಿದ್ಯುತ್ತನ್ನು ಖರೀದಿಸಲಾಗುತ್ತಿದೆ. ಹಾಗೂ ನವೆಂಬರ್ 2001 ರಿಂದ ಫೆಬ್ರುವರಿ 2002 ರವರೆಗೆ 228 ಮಿಲಿಯನ್ ಯೂನಿಟ್ ವಿದ್ಯುತ್‌ನ್ನು ಖರೀದಿಸಿದೆ. ಮತ್ತು ರೂ. 66.79 ಕೋಟಿಗಳನ್ನು ಪಾವತಿಸಿದೆ.

ಜನವರಿ 2002ರಲ್ಲಿ 100 ಮೆಗಾ ವ್ಯಾಟ್ ವಿದ್ಯುತ್‌ನ್ನು ಖರೀದಿಸಲು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತವು ಗ್ರಿಡ್ಕೊ (ಒರಿಸ್ಸಾ) ಜೊತೆ ವಿದ್ಯುತ್ ಖರೀದಿ ಒಪ್ಪಂದಕ್ಕೆ (ಪಿಪಿಎ) ಸಹಿ ಹಾಕಿದೆ. ಆದರೆ ಪ್ರಸರಣ ನಿರ್ಬಂಧಗಳಿಂದ ಈ ವಿದ್ಯುತ್ ದಕ್ಷಿಣ ವಲಯ ಗ್ರಿಡ್ : ಕರ್ನಾಟಕಕ್ಕೆ ಹರಿಯುತ್ತಿಲ್ಲ.

ಕೊರಟಗೆರೆ ತಾಲ್ಲೂಕಿನ ಪಟ್ಟಣ ಪಂಚಾಯಿತಿಗೆ ಬಿಡುಗಡೆಯಾದ ಅನುದಾನ.

156(1672) ಶ್ರೀ ಸಿ. ಚಿನ್ನಿಪ್ಪ (ಕೊರಟಗೆರೆ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

1) ತುಮಕೂರು ಜಿಲ್ಲೆ, ಕೊರಟಗೆರೆ ತಾಲ್ಲೂಕಿನ ಪಟ್ಟಣದ ಅಭಿವೃದ್ಧಿಗೆ 1999-2000, 2001-2002ನೇ ಸಾಲಿನಲ್ಲಿ ಬಿಡುಗಡೆಯಾದ ಅನುದಾನವೆಷ್ಟು?

2) ಆ ಸಾಲಿನಲ್ಲಿ ಬಿಡುಗಡೆಯಾದ ಅನುದಾನವನ್ನು ಯಾವ ಯಾವ ಕಾರ್ಯಗಳಿಗೆ ವಿನಿಯೋಗಿಸಲಾಗಿದೆ. (ವಿವರ ನೀಡುವುದು)

3) ಇನ್ನೂ ಬಾಕಿ ಇರುವ ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ರೀತಿಯಲ್ಲಿ ಅನುದಾನವನ್ನು ಮಂಜೂರು ಮಾಡಿ ಅಭಿವೃದ್ಧಿ ಕಾರ್ಯಗಳನ್ನು ಪೂರೈಸಿಕೊಡುವುದು ಯಾವಾಗ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :—

10ನೇ ಹಣಕಾಸು ಯೋಜನೆಯಡಿಯಲ್ಲಿ 1999-2000 ನೇ ಸಾಲಿನಲ್ಲಿ ಬಿಡುಗಡೆಯಾದ ಮೊತ್ತ ರೂ. 20,30,330-00

ಹಾಗೂ ಯೋಜನೆಯಡಿಯಲ್ಲಿ ರೂ.25.00 ಲಕ್ಷಗಳು ಬಿಡುಗಡೆಯಾಗಬೇಕಾಗಿದ್ದು ಕಾಮಗಾರಿಗಳು ಪ್ರಗತಿಯಲ್ಲಿವೆ.

2001-2002ನೇ ಸಾಲಿನಲ್ಲಿ ಹಣ ಬಿಡುಗಡೆಯಾಗಿರುವುದಿಲ್ಲ.

2) 13 ಅಂಗಡಿ ಮಳಿಗೆಗಳ ನಿರ್ಮಾಣ ಹಾಗೂ ಇತರೆ ಅಭಿವೃದ್ಧಿ ಕಾಮಗಾರಿಗಳಿಗೆ ವಿನಿಯೋಗಿಸಲಾಗಿದೆ.

3) ಪ್ರಸ್ತಾವನೆ ಬಂದಲ್ಲಿ ಪರಿಶೀಲಿಸಲಾಗುವುದು.

ಸ್ವಯಂ ಘೋಷಿತ' ಆಸ್ತಿ ತೆರಿಗೆ.

159(1780) ಶ್ರೀ ಕೆ.ಜಿ.ಬೋಪಯ್ಯ ಮಹಾಂತೇಶ್ ಶಿವಾನಂದ (ಬೈಲಹೊಂಗಲ) :— ಮಾನ್ಯ ಪೌರಾಡಳಿತ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವಿರೆ.

ಅ) ರಾಜ್ಯದಲ್ಲಿ ಪೌರಸಭೆಯ ವ್ಯಾಪ್ತಿಯಲ್ಲಿಯೂ ಸಹ ಈ ವರ್ಷದಿಂದ ಸ್ವಯಂ ಘೋಷಿತ ಆಸ್ತಿ ತೆರಿಗೆ ಯೋಜನೆ ಜಾರಿಗೆ ಬಂದಿದೆಯೇ;

ಆ) ಈ ಸ್ವಯಂ ಘೋಷಿತ ಆಸ್ತಿ ತೆರಿಗೆ ಯೋಜನೆಯಿಂದ ನಗರ ಪ್ರದೇಶದಲ್ಲಿರುವ ಜನರ ಆಸ್ತಿ ತೆರಿಗೆ ತುಂಬಾ ಜಾಸ್ತಿಗೆ ಆಗುತ್ತದೆ ಎಂಬ ವಿಷಯ ಸರ್ಕಾರದ ಗಮನಕ್ಕೆ ಬಂದಿರುವೆ;

ಇ) ಹಾಗಾದಲ್ಲಿ, ಈ ಸ್ವಯಂ ಘೋಷಿತ ಆಸ್ತಿ ತೆರಿಗೆ ಯೋಜನೆಯಲ್ಲಿ ತೆರಿಗೆ ಕಡಿಮೆ ಮಾಡಲು ಕ್ರಮ ಕೈಗೊಳ್ಳಲಾಗುವುದೇ?

ಶ್ರೀ ಮಲ್ಲಿಕಾರ್ಜುನ ನಾಗಪ್ಪ (ಪೌರಾಡಳಿತ ರಾಜ್ಯ ಸಚಿವರು) :—

ಅ) ರಾಜ್ಯದ ಎಲ್ಲಾ ಸ್ಥಳೀಯ ಸಂಸ್ಥೆಗಳಿಗೆ ದಿನಾಂಕ : ೧-೪-೨೦೦೨ರಿಂದ ಸ್ವಯಂ ಘೋಷಿತ ಆಸ್ತಿ ತೆರಿಗೆ ಪದ್ಧತಿಯನ್ನು ಜಾರಿಗೆ ತರಲಾಗುವುದು.

ಆ) ಇಲ್ಲ.

ಇ) ಉದ್ಭವಿಸುವುದಿಲ್ಲ.